	Kodagu	78
	Chamarajanagar	97
	Ramanagara	147
	Chikkaballapur	167
	Bangalore Rural	40
	Bangalore Urban	0
	Kolar	52
	Total	1917
	GRAND TOTAL (Kms)	3411

232 ಶ್ರೀ ಕುಮಾರಸ್ವಾಮಿ ಹೆಚ್.ಕೆ
ಲೋಕೋಪಯೋಗಿ ಸಚಿವರು

ಅ) ಹಾಸನ ಜಿಲ್ಲೆ ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ ಲೋಕೋಪಯೋಗಿ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ರಾಜ್ಯ ಹೆದ್ದಾರಿ ನಿರ್ವಹಣೆಗೆ ಹಂಚಿಕೆ ಮಾಡಲಾಗಿರುವ ರೂ. 195,24 ಲಕ್ಷಗಳ ಅನುದಾನ ಹಾಗೂ ಇತರ ಲಭ್ಯ ಅನುದಾನದಲ್ಲಿ ಗುಂಡಿ ಮುಚ್ಚುವ ಕಾಮಗಾರಿಯನ್ನು ಕೈಗೊಂಡು ರಸ್ತೆಗಳನ್ನು ಸಂಚಾರಕ್ಕೆ ಯೋಗ್ಯವಾಗಿಡಲು ಕ್ರಮ ಜರುಗಿಸಲಾಗುತ್ತಿದೆ.

ಆ) ರಾಜ್ಯ ಹೆದ್ದಾರಿ-112 ಬೇಲೂರು-ಸೋಮವಾರಪೇಟೆ ರಸ್ತೆ ಮತ್ತು 110ರ ಬೇಲೂರು-ಕೊಂಡ್ಲಿಪೇಟೆ ರಸ್ತೆ ಈ ಹಿಂದೆ 3054ರ ಶೀರ್ಷಿಕೆಯಡಿ ಒಪ್ಪಿಗೆ ಪಡೆದಿದ್ದು, ಟೆಂಡರ್ ಪ್ರಕ್ರಿಯೆಯು ಸ್ಥಗಿತಗೊಂಡಿರುವುದು ನಿಜವೇ;

ಹೌದು.

ಇ) ಹಾಗಿದ್ದಲ್ಲಿ ಇವುಗಳ ಮಂಜೂರಾತಿಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

2003-09ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 3054 ಯೋಜನೆ ಯೋಜನೇತರ ಅಡಿಯಲ್ಲಿ ಪ್ರಸ್ತಾಪಿತ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿಗಳ ನಿರ್ವಹಣೆಗಾಗಿ ಹಂಚಿಕೆ ಮಾಡಲಾಗಿರುವ ರೂ. 195.24 ಲಕ್ಷಗಳ ಅನುದಾನದಲ್ಲಿ ಬೇಲೂರು ಸೋಮವಾರಪೇಟೆ ರಾಜ್ಯ ಹೆದ್ದಾರಿಯ ನಿರ್ವಹಣೆಗೆ ರೂ.78.94 ಲಕ್ಷ ಹಾಗೂ ಬೇಲೂರು ಕೊಡ್ಲಿಪೇಟೆ ರಾಜ್ಯ ಹೆದ್ದಾರಿ ನಿರ್ವಹಣೆಗೆ ರೂ. 49.40 ಲಕ್ಷ ಹಂಚಿಕೆ ಮಾಡಲಾಗಿದೆ. ಬೇಲೂರು ಸೋಮವಾರಪೇಟೆ ರಸ್ತೆಯ ಕಿ.ಮೀ 12.91 ರಿಂದ 17.15

ಹಾಗೂ 20.87 ರಿಂದ 63.50 ಕಿ.ಮೀವರೆಗೆ ಹಾಗೂ ಬೇಲೂರು ಕೊಡ್ಲಿಪೇಟೆ ರಸ್ತೆಯ ಕಿ.ಮೀ 20.20 ರಿಂದ 68.70 ರವರೆಗಿನ ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚಿ ಸಂಚಾರಕ್ಕೆ ಯೋಗ್ಯವಾಗಿಡಲು ಕ್ರಮ ಕೈಗೊಳ್ಳಲಾಗಿದ್ದು, ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ.

ಬೇಲೂರು ಸೋಮವಾರಪೇಟೆ ರಾಜ್ಯ ಹೆದ್ದಾರಿ ಕಿ.ಮೀ 9 ರಿಂದ 12.90 ಹಾಗೂ 15.05 ರಿಂದ 17.15 ಸಂಪೂರ್ಣ ಅಭಿವೃದ್ಧಿಯ ಅಗತ್ಯವಿರುವುದರಿಂದ, ಸದರಿ ರಸ್ತೆ ಅಭಿವೃದ್ಧಿಗೆ ರೂ. 372.00 ಲಕ್ಷಗಳ ಅಂದಾಜನ್ನು ತಯಾರಿಸಲಾಗಿದ್ದು ಅನುದಾನದ ಲಭ್ಯತೆಯನ್ನಾಧರಿಸಿ, ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಹಾಸನ ವಿಭಾಗದ ವ್ಯಾಪ್ತಿಯ 20.00 ಕಿ.ಮೀ ಉದ್ದದ ಬೇಲೂರು ಕೊಡ್ಲಿಪೇಟೆ ರಸ್ತೆಯ ಸರಪಳಿ 0.00 ರಿಂದ 9.00 ಕಿ.ಮೀ ವರೆಗೆ ರಸ್ತೆ ಅಭಿವೃದ್ಧಿ ಡಾಂಬರೀಕರಣಕ್ಕಾಗಿ ಲೆಕ್ಕಶೀರ್ಷಿಕೆ 3054 ಓಆರ್‌ಎಫ್ ಅಡಿಯಲ್ಲಿ ರೂ.125.00 ಲಕ್ಷಗಳ ಅನುಮೋದನೆ ದೊರತಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ, ಬೇಲೂರು ಸೋಮವಾರಪೇಟೆ ರಾಜ್ಯ ಹೆದ್ದಾರಿ ಕಿ.ಮೀ 9.00 ರಿಂದ 13.50 ಹಾಗೂ ಕಿ.ಮೀ 13.75 ರಿಂದ 43.23 ಕಿ.ಮೀ ವರೆಗೆ ಒಟ್ಟು 91.95 ಕಿ.ಮೀ ಉದ್ದದ ರಸ್ತೆಯನ್ನು ಲಭ್ಯ ಅನುದಾನದಲ್ಲಿ ಗುಂಡಿಗಳನ್ನು ಮುಚ್ಚಿ ಸಂಚಾರಕ್ಕೆ ಯೋಗ್ಯವಿಡಲಾಗಿದೆ.

235 ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ.

ಲೋಕೋಪಯೋಗಿ ಸಚಿವರು

ಅ) ಮಂಡ್ಯದಿಂದ ಚೀರನಹಳ್ಳಿ–ಹಳುವಾಡಿ–ತಗ್ಗಹಳ್ಳಿ ರಸ್ತೆ ಅಭಿವೃದ್ಧಿ ಕಾರ್ಯ ಯಾವ ಹಂತದಲ್ಲಿದೆ.

ಈ ಕಾಮಗಾರಿಯು ಮಂಡ್ಯ ಪ್ಯಾಕೇಜ್ ಸಂಖ್ಯೆ–15ರಲ್ಲಿ ಸೇರಿದ್ದು, ಮೆಟಲಿಂಗ್ ಕಾಮಗಾರಿ ಪೂರ್ಣಗೊಂಡಿದ್ದು, ಡಾಂಬರೀಕರಣ ಬಾಕಿ ಇರುತ್ತದೆ.

ಆ) ಮಂಡ್ಯದಿಂದ ಚನ್ನಪ್ಪನದೊಡ್ಡಿ ರಸ್ತೆ (ಬೇಲೂರು ಮಾರ್ಗವಾಗಿ) ಅಭಿವೃದ್ಧಿ ಕಾರ್ಯ ಯಾವ ಹಂತದಲ್ಲಿದೆ;

ಈ ಕಾಮಗಾರಿಯು ಮಂಡ್ಯ ಪ್ಯಾಕೇಜ್–4ರಲ್ಲಿ ಸೇರಿದ್ದು, ಗುತ್ತಿಗೆದಾರರ ವೆಚ್ಚ ಮತ್ತು ಹೊಣೆಗಾರಿಕೆ ಮೇಲೆ ಗುತ್ತಿಗೆಯನ್ನು ರದ್ದುಪಡಿಸಲಾಗಿದೆ.

ಇ) : ಬೆಂಗಳೂರು ಮೈಸೂರು ರಸ್ತೆಯಿಂದ ಟಿ.ಎಂ.ಹೊಸೂರು ಕೊಡಿಯಾಲಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಕಾರ್ಯ ಯಾವ ಹಂತದಲ್ಲಿದೆ;